ಮೈಸೂರ ಗೆಜೆಟ್.

ಸಂ. 42.] ಸರಕಾರದಿಂದ ಪ್ರಸಿದ್ಧ ಆದದ್ದು. [ನಂ. 7.

ಬೆಂಗಳೂರು, ಗುರುವಾರ, ಫೆಬ್ರವರಿ ತಾ॥ 14, ಸನ್ 1907.

II.ನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟು ಈ, ಜೀಫ್ ಜಡ್ಜ್‌ಗಳು ವಗ್ಯೆರೆಯರಿಂದ ಕೊಡೋಣಾದ ಇನ್ಸಿಹಾರ್ನಾಮೆಗಳು.

ಕೊಡಗು ಚೀಫ್ ಕಮಿಷನರವರಿಂದ ಕೊಡೋಣಾದ.

ಇನ್ಸಿಹಾರ್ನಾಮೆ.

ದರಜಾಗಾ, ಬೆಂಗಳೂರು, ತಾರೀಖು 29ನೆ ಜನವರಿ 1907ನೆ ಇಸವಿ.

ನಂ. 13. ಮುಂಜೆ ಜಾರಿಯಲ್ಲಿದ್ದ ಪದ್ಧತಿಯನ್ನು ರದ್ದುಪಡಿಸಿ ಈ ಮೂಲಕವಾಗಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ: ಸನ್ 1907ನೆ ಇಸವಿ ಏಪ್ರಿಲ್ ತಾರೀಖು 1ರ ಲಾಗಾಯಿತು 1908ನೆ ಇಸವಿ ಮಾರ್ಚ್ ತಾರೀಖು 31ರ ವರವಿಗೆ ಕೊಡಗು ಕೇವೆಯಲ್ಲಿ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗೆಯುವ ದಕ್ಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ವಿಷಕ್ರವಾದ ಪದಾರ್ಥಗಳಲ್ಲದ ಇನ್ನಿತರಯಿಂದ ತಯಾರಾದ ನಿಷಾವಸ್ತುಗಳನ್ನು ಚಿಲ್ಲರೆಯಾಗಿ ಮಾರುವದಕ್ಕೆ ಸ್ವಾತಂತ್ರ್ಯವನ್ನು ಈ ಕೆಳಗೆ ಕಾಣಿಸಿರುವ ವೇರಿಗೆ ಹರಾಜು ಮಾಡಲ್ಪಡುವದು.

(i) 1907ನೆ ಇಸವಿ ಮಾರ್ಚ್ 4ನೆ ತಾರೀಖಿನಲ್ಲಿ ಮಡಿಕೇರಿಯಲ್ಲಿ ಮಡಿಕೇರಿ ತಾಲ್ಲೂಕು ಸುಬೇದಾರರ ಮುಂದೆ.

(ii) 1907ನೆ ಇಸವಿ ಮಾರ್ಚ್ 6ನೆ ತಾರೀಖಿನಲ್ಲಿ ವೀರರಾಜಪೇಟೆಯಲ್ಲಿ ಯೆಡಿತಾಲ್ಕುನಾಡು ತಾಲ್ಲೂಕು ಸುಬೇದಾರರ ಮುಂದೆ.

(iii) 1907ನೆ ಇಸವಿ ಮಾರ್ಚ್ 8ನೆ ತಾರೀಖಿನಲ್ಲಿ ಗೋಣಿಕೊಪ್ಪಲ್ಲಿ ಕಿಗ್ಗಟ್ಟುನಾಡು ತಾಲ್ಲೂಕು ಸುಬೇದಾರರ ಮುಂದೆ.

2. ವಿಕ್ರಯವು ಕೊಡಗು ಕಮಿಷನರವರ ಮುಂಜಾಗ್ರತೆಗೆ ವಳಪಟ್ಟಿರುತ್ತದೆ. ಅವರು ಯಾವ ಕಾರಣವೂ ನಮೂದಿಸದೆ ಚಿಲ್ಲರೆಯಾಸ್ತುದಾರನಿಗೆ ಲೈಸೆನ್ಸನ್ನು ತಿರಸ್ಕರಿಸುವುದು. ಹೆಂಗಸಿಗೆ ಲೈಸೆನ್ಸು ಕೊಡಲ್ಪಡುವದಿಲ್ಲಾ.

3. ತಾನು ಮೊದಲೇ ದರಖಾಸ್ತು ಮಾಡಿದ ಮೊಲಗನ್ನು ಕೊಟ್ಟಿದ್ದ ಪಕ್ಷದಲ್ಲಿ ಚೀಫ್ ಕಮಿಷನರವರಿಂದ ವಿಧಿಸೋಣಾದ ಫಾರಮಿನಲ್ಲಿ ಕಮಿಷನರವರಿಂದ ಮಂಜೂರಾದ ದರಖಾಸ್ತುದಾರನಿಗೆ ಲೈಸೆನ್ಸು ಕೊಡಲ್ಪಡುವದು.

4. 80 ತೊಲದ ಕೇರಿಗೆ 20 ರೂಪಾಯಿ ವೇರಿಗೆ ಕಮಿಷನರವರಿಂದ ಲೈಸೆನ್ಸಿದಾರನಿಗೆ ಅಫೀಂ ಕೊಡಲ್ಪಡುತ್ತೆ.

5. 80 ತೊಲದ ಕೇರಿಗೆ ಒಂದೇ ಬೆಲೆಯಾಗಿ 45 ರೂಪಾಯಿ ವೇರಿಗೆ ಅಫೀಮನ್ನು ಲೈಸೆನ್ಸುದಾರನು ಜನಗಳಿಗೆ ಮಾರತಕ್ಕದ್ದು.

6. ಚಿಲ್ಲರೆಯಾಗಿ ಮಾರುವ ಅಂಗಡಿಗಳು ಮಾತ್ರ ಇವುಗಳು ಅಪ್ಪಣೆಯಾವವಂದರೆ:—

ಮಡಿಕೇರಿಯಲ್ಲಿ ಒಂದು ...
ವೀರರಾಜಪೇಟೆಯಲ್ಲಿ ಒಂದು.
ಗೋಣಿಕೊಪ್ಪಲ್ಲಿ ಒಂದು.

7. ಇನ್ನು ಹೆಚ್ಚಿಗೆ ಬೇಕಾಗುವ ತಪ್ಪಸಲುಗಳನ್ನು ಮಡಿಕೇರಿಯಲ್ಲಿ ಕೊಡಗು ಕಮಿಷನರವರಲ್ಲಿ ದರ್ಖಾಸ್ತು ಮಾಡಿ ತಿಳಿದುಕೊಳ್ಳುವುದು.

ಎಫ್. ಪಿ. ರೆನ್ನಿ,
ಚೀಫ್ ಕಮಿಷನರವರ ಸೆಕ್ರೆಟರಿಯವರು.